# ಕರ್ನಾಟಕ ವಿಧಾನ ಪರಿಷತ್
## 135ನೇ ಅಧಿವೇಶನ –2018

| | |
|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | 237(337) |
| ಸದಸ್ಯರ ಹೆಸರು | ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12.07.2018 |

| | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ವಿಶ್ವವಿದ್ಯಾಲಯವನ್ನು ವಿಭಜಿಸಿ 3 ವಿಭಾಗಗಳನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; | ಗಮನಕ್ಕೆ ಬಂದಿದೆ |
| ಆ. | ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಹಣಕಾಸಿನ ಲಭ್ಯತೆಯ ಕೊರತೆಯಿಂದಾಗಿ ತೊಂದರೆಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ; | ಹಣಕಾಸಿನ ಕೊರತೆ ಎದುರಾಗದಂತೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಆರಂಭಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಪರ್ಯಾಪ್ತ ಆರ್ಥಿಕಾನುದಾನವನ್ನು ಒದಗಿಸಲಾಗಿದೆ. |
| ಇ | ಇದುವರೆವಿಗೂ ಈ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ನೀಡಿರುವ ಅನುದಾನ ಎಷ್ಟು? (ವರ್ಷವಾರು ವಿವರಗಳನ್ನು ನೀಡುವುದು) | ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಒದಗಿಸಲಾಗಿರುವ/ಅವಕಾಶ ಕಲ್ಪಿಸಲಾಗಿರುವ ಅನುದಾನದ ವರ್ಷವಾರು ವಿವರಗಳನ್ನು ಈ ಕೆಳಕಂಡಂತೆ ತ:ಖ್ತೀಕರಿಸಲಾಗಿದೆ. |

| | | |
|---|---|---|
| **2016** | | |
| 1 | ಸರ್ಕಾರದ ನಿರ್ದೇಶನದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಒದಗಿಸಲಾದ ಮೂಲಧನ | ರೂ.1.00 ಕೋಟಿ |
| **2017** | | |
| 1 | ಸರ್ಕಾರದ ನಿರ್ದೇಶನದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದ ದಿನಾಂಕ:26.07.2017ರ ಆದೇಶದನ್ವಯ ಒದಗಿಸಲಾದ ಅನುದಾನ | ರೂ.2.00 ಕೋಟಿ |
| 2 | ಸರ್ಕಾರದ ನಿರ್ದೇಶನದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದ ದಿನಾಂಕ:29.12.2017ರ ಆದೇಶದನ್ವಯ ಒದಗಿಸಲಾದ ಅನುದಾನ | ರೂ.2.00 ಕೋಟಿ |
| 3 | ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಿಗದಿಪಡಿಸಲಾಗಿದ್ದ ರೂ.12.00 ಕೋಟಿಗಳ ಅನುದಾನದ ಪೈಕಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಹಂಚಿಕೆ ಮಾಡಿ ಮಂಜೂರು ಮಾಡಲಾದ ಅನುದಾನ | ರೂ. 5.00 ಕೋಟಿ |

--2

| | | | | |
|---|---|---|---|---|
| | | **2018** | | |
| | | 1 | ಸರ್ಕಾರದ ನಿರ್ದೇಶನದ ಮೇರೆಗೆ ಬೆಂಗಳೂರು ವಿಶ್ವವಿದ್ಯಾಲಯದ ದಿನಾಂಕ:02.03.2018ರ ಆದೇಶದನ್ವಯ ಒದಗಿಸಲಾದ ಅನುದಾನ | ರೂ.10.00 ಕೋಟಿ |
| | | ಒಟ್ಟು | | **ರೂ.20.00 ಕೋಟಿ** |
| | | 2018–19ನೇ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಭಿವೃದ್ಧಿ ಸಹಾಯಾನುದಾನವಾಗಿ ನಿಗದಿಪಡಿಸಿರುವ ವಾರ್ಷಿಕ ರೂ. 20.46 ಕೋಟಿಗಳ ಪೈಕಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ರೂ. 1.50 ಕೋಟಿಗಳನ್ನು ಹಂಚಿಕೆ ಮಾಡಲು ಆರ್ಥಿಕ ಇಲಾಖೆಯು ಸಲಹೆ ನೀಡಿರುತ್ತದೆ. ಆದರೆ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಪ್ರಸಕ್ತ ಸನ್ನಿವೇಶದಲ್ಲಿ ಹೆಚ್ಚಿನ ಹಣಕಾಸಿನ ನೆರವಿನ ಅಗತ್ಯತೆ ಇರುವುದನ್ನು ಪರಿಗಣಿಸಿ ಅನುದಾನದ ಮರು ಹಂಚಿಕೆ ಮಾಡಲು ಪರಿಶೀಲಿಸಲಾಗುತ್ತದೆ. | | |

**ಇಡಿ 169 ಯುಬಿವಿ 2018**

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು